ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	2000
ಸದಸ್ಯರ ಹೆಸರು	ಶ್ರೀಮತಿ ಜಯಮ್ಮ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	27.03.2020

<table>
<tr><th>ಕ್ರಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ.</td><td>ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ, ಚಳ್ಳಕೆರೆ ತಾಲ್ಲೂಕಿನಲ್ಲಿ 2019-20ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ನೀಡಲಾದ ಅನುದಾನ ಎಷ್ಟು?</td><td>ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ, ಚಳ್ಳಕೆರೆ ತಾಲ್ಲೂಕಿನಲ್ಲಿ 2019-20ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಒಟ್ಟು ರೂ.1304.76 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.</td></tr>
<tr><td>ಆ.</td><td>ಎಷ್ಟು ಗ್ರಾಮಗಳಿಗೆ ಸಂಪರ್ಕ ರಸ್ತೆಗಳನ್ನು ಕಲ್ಪಿಸಲಾಗಿದೆ?</td><td>ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ, ಚಳ್ಳಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 20 ಗ್ರಾಮ ಪಂಚಾಯಿತಿಗಳಿದ್ದು, 94 ಗ್ರಾಮಗಳನ್ನು ಒಳಗೊಂಡಿದ್ದು, ಎಲ್ಲಾ ಗ್ರಾಮಗಳಿಗೂ ಸಂಪರ್ಕ ರಸ್ತೆಗಳನ್ನು ಕಲ್ಪಿಸಲಾಗಿದೆ.</td></tr>
<tr><td>ಇ</td><td>ಈವರೆಗೆ ಬಳಕೆ ಮಾಡಲಾದ ಅನುದಾನ ಎಷ್ಟು?</td><td>2019-20ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿ ಹಾಗೂ ದುರಸ್ತಿಗಾಗಿ ರೂ.158.94 ಲಕ್ಷಗಳನ್ನು ಬಳಕೆ ಮಾಡಲಾಗಿದೆ. ವಿವರಗಳು ಕೆಳಗಿನಂತಿವೆ.
(ರೂ.ಲಕ್ಷಗಳಲ್ಲಿ)
<table>
<tr><th>ಯೋಜನೆ</th><th>ನಿಗಧಿಪಡಿಸಿದ ಅನುದಾನ</th><th>□□□□□</th></tr>
<tr><td>3054-ಸಿ.ಎಂ.ಜಿ.ಎಸ್.ವೈ.</td><td>81.55</td><td>81.10</td></tr>
<tr><td>3054-ಟಾಸ್ಕ್ ಫೋರ್ಸ್</td><td>77.81</td><td>0.00</td></tr>
<tr><td>5054-03-337-0-75</td><td>275.00</td><td>-</td></tr>
<tr><td>5054-03-337-0-75-059(ಮಳೆಹಾನಿ)</td><td>120.40</td><td>77.84</td></tr>
<tr><td>5054 ವಿಶೇಷ ಅನುದಾನ</td><td>600.00</td><td>0.00</td></tr>
<tr><td>ನಮ್ಮ ಗ್ರಾಮ ನಮ್ಮ ರಸ್ತೆ</td><td>150.00</td><td>-</td></tr>
<tr><td>ಒಟ್ಟು</td><td>1304.76</td><td>158.94</td></tr>
</table></td></tr>
<tr><td>ಈ</td><td>2018-19ನೇ ಸಾಲಿನಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ?</td><td>• 2018-19ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರ ಚಳ್ಳಕೆರೆ ತಾಲ್ಲೂಕು ವ್ಯಾಪ್ತಿಯ ಗ್ರಾಮೀಣ ಜನವಸತಿಗಳಿಗೆ ಹೊಸದಾಗಿ ಯಾವುದೇ ನೀರು ಶುದ್ಧೀಕರಣ ಘಟಕಗಳನ್ನು ಮಂಜೂರು ಮಾಡಿರುವುದಿಲ್ಲ.
• ಆದರೆ 2017-18ನೇ ಸಾಲಿನಲ್ಲಿ ಮಂಜೂರಾದ 38 ಘಟಕಗಳ ಪೈಕಿ 2018-19ನೇ ಸಾಲಿನಲ್ಲಿ 37 ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದ್ದು, ನಿವೇಶನ ಸಮಸ್ಯೆಯಿಂದ ಒಂದು ಘಟಕವನ್ನು ಕೈಬಿಡಲಾಗಿದೆ.</td></tr>
</table>

ಕಡತ ಸಂಖ್ಯೆ: ಗ್ರಾಅಪ:01/95:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು